# ಆಲೂರಿನ ಸಿವಿಲ್ ಜಡ್ಜ್ ಹಾಗೂ ಜೆ ಎಂ ಎಫ್ ಸಿ ರವರ ನ್ಯಾಯಾಲಯ

## ಸಿಸಿ ನಂಃ 597/2016

ಪಿರ್ಯಾದಿಃ- ಸರ್ಕಾರದ ಪರವಾಗಿ ಆಲೂರು ಪೋಲೀಸ್ ಠಾಣೆ

ವಿರುದ್ಧ

ಆರೋಪಿಗಳುಃ-

1. ಶಶಿ, ತಂದೆಃ ದೇವೇಗೌಡ,
ಪ್ರಾಯಃ 39 ವರ್ಷ, ವ್ಯವಸಾಯದ
ವಾಸಃ ಬೈರಾಪುರ ಗ್ರಾಮ, ಆಲೂರು ತಾಲೋಕು.

2. ಹರೀಶ್‌ಕುಮಾರ್ ಯಾನೆ ಕುಮಾರ್,
ತಂದೆಃ ಗಿಡ್ಡೇಗೌಡ,
ಪ್ರಾಯಃ 29 ವರ್ಷ,
ವಾಸಃ ಟಿ.ತಿಮ್ಮನಹಳ್ಳಿ ಗ್ರಾಮ,
ಆಲೂರು ತಾಲೋಕು.

3. ಗಣೇಶ, ತಂದೆಃ ತಮ್ಮಣ್ಣ,
ಪ್ರಾಯಃ 29 ವರ್ಷ, ವ್ಯವಸಾಯ,
ವಾಸಃ ಬೈರಾಪುರ ಗ್ರಾಮ, ಆಲೂರು ತಾಲೊಕು.

## ದೋಷಾರೋಪಣೆ

ಆಶಾ ಕೆ.ಎಸ್, ಬಿ.ಎ.ಎಲ್.ಎಲ್.ಎಲ್.ಬಿ., ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳು ಆಲೂರು, ಆದ ನಾನು ನಿಮ್ಮ ವಿರುದ್ಧ ಈ ಕೆಳಕಂಡಂತೆ ದೋಷರೊಪಣೆ ಮಾಡುತ್ತಿದ್ದೇನೆ.

ದಿನಾಂಕಃ 22-3-2016ರಂದು ರಾತ್ರಿ 11.00 ಗಂಟೆಯಲ್ಲಿ ಆಲೂರು ಪೋಲಿಸ್ ಠಾಣಾ ಸರಹದ್ದಿಗೆ ಸೇರಿದ ಬೈರಾಪುರ ಗ್ರಾಮದ ರೆಡ್‌ಬುಲ್ ಡಾಬಾಗೆ ಚಾಸಾ-1 ಧರಣಿ ಮತ್ತು ಚಾಸಾ-2 ಹರ್ಷರವರು ಹೋಗಿ ಊಟ ಮುಗಿಸಿ ಹಣ ಕೊಡುವಾಗ, ಚಾಸಾ-1ರವರು ಆರೋಪಿಗಳಾದ ನಿಮಗೆ ತಾವು ಹಣ

ಕೊಡವುದಿಲ್ಲವೇ ತಂಗಳು ಅನ್ನ ಕೊಡುತ್ತೀರಿ ಎಂದು ಕೇಳಿದ್ದಕ್ಕೆ 1ನೇ ಆರೋಪಿಯಾದ ನೀವು ಚಾಸಾ-1ರವರನ್ನು ಉದ್ದೇಶಿಸಿ ಏನೋ ಸೂಳೇಮಗನೇ ನಾವು ಹೋಟೆಲ್‌ನಲ್ಲಿ ತಂಗಳು ಅನ್ನ ಕೊಡುತ್ತೇವೆಯೇ ಎಂದು ಹೇಳಿ ನಿನಗೆ ಬುದ್ದಿ ಕಲಿಸುತ್ತೇನೆ ಕಂತ್ರಿ ನನ್ನ ಮಗನೇ ಎಂದು, 3ನೇ ಆರೋಪಿಯಾದ ನೀವು ಸೂಳೆ ಮಕ್ಕಳಾ, ಬೋಳಿಮಕ್ಕಳಾ ಎಂದು ಅವಾಚ್ಯ ಶಬ್ದಗಳಿಂದ ನಿಂದಿಸಿದ್ದು ನೀವು ಭಾರತ ದಂಡ ಸಂಹಿತೆಯ ಕಲಂ 504 ಸಹವಾಚಕ 34ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞೆಯೊಳಗೆ ಮಾಡಿರುತ್ತೀರಿ ಎಂದು ಆರೋಪ ಮಾಡಲಾಗಿದೆ.

ಎರಡನೇಯದಾಗಿ ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಸಮಯದಲ್ಲಿ 1ನೇ ಆರೋಪಿಯಾದ ನೀವು ಒಂದು ಕಬ್ಬಿಣದ ರಾಡನ್ನು ತೆಗೆದುಕೊಂಡು ಚಾಸಾ-1ರವರ ಮೈ, ಕೈಗೆ ಹೊಡೆದು, 2ನೇ ಆರೋಪಿಯಾದ ನೀವು ಚಾಕುವಿನಿಂದ ಚಾಸಾ-1ರವರ ಕೈ ಬೆರಳುಗಳಿಗೆ ಕುಯ್ದು ಗಾಯ ಸಾಮಾನ್ಯ ಸ್ವರೂಪದ ಗಾಯಗಳನ್ನುಂಟು ಮಾಡಿದ್ದು ನೀವು ಭಾರತ ದಂಡ ಸಂಹಿತೆಯ ಕಲಂ 324 ಸಹವಾಚಕ 34ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞೆಯೊಳಗೆ ಮಾಡಿರುತ್ತೀರಿ ಎಂದು ಆರೋಪ ಮಾಡಲಾಗಿದೆ.

ಮೂರನೇಯದಾಗಿ ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಸಮಯದಲ್ಲಿ ಆರೋಪಿಗಳಾದ ನೀವು ಎಲ್ಲಾರೂ ಸೇರಿಕೊಂಡು ಚಾಸಾ-1 ಮತ್ತು 2ರವರನ್ನು ಉದ್ದೇಶಿಸಿ ಇನ್ನೊಂದು ಸಲ ತಮ್ಮ ಡಾಬ ಕಡೆಗೆ ಬಂದರೆ ನಿಮ್ಮನ್ನು ಕೊಲೆ ಮಾಡದೇ ಬಿಡುವುದಿಲ್ಲ ಎಂದು ಕೊಲೆ ಬೆದರಿಕೆಯನ್ನು ಹಾಕಿದ್ದು ನೀವು ಭಾರತ ದಂಡ ಸಂಹಿತೆಯ ಕಲಂ 506 ಸಹವಾಚಕ 34ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞೆಯೊಳಗೆ ಮಾಡಿರುತ್ತೀರಿ ಎಂದು ಆರೋಪ ಮಾಡಲಾಗಿದೆ.

ಪ್ರಶ್ನೆ:1ಃ ಈಗ ಓದಿ ಹೇಳಿದ ವಿಷಯವು ನಿಮಗೆ ಅರ್ಥವಾಯಿತೆ?

ಉತ್ತರಃ- ಆ.1ಃ

ಆ.2ಃ

ಆ.3ಃ

ಪ್ರಶ್ನೆ:2ಃ ತಪ್ಪಾಯಿತೆನ್ನುವಿರೋ ಅಥವಾ ವಿಚಾರಣೆಯಾಗಬೇಕೆ?

ಉತ್ತರಃ- ಆ.1ಃ

ಆ.2ಃ

ಆ.3ಃ

(ಮೇಲ್ಕಂಡ ದೋಷಾರೋಪಣೆಯನ್ನು ಆರೋಪಿತರಿಗೆ ತಿಳಿದ ಕನ್ನಡ ಭಾಷೆಯಲ್ಲಿ ಓದಿ ಹೇಳಿ, ಅವರಿಂದ ಬಂದ ಉತ್ತರವನ್ನು ಸರಿಯಾಗಿ ಬರೆದಿದ್ದೇನೆಂದು ಧೃಡೀಕರಿಸಿರುತ್ತೇನೆ.)

ಸ್ಥಳಃ ಆಲೂರು<br>
ದಿನಾಂಕಃ 26-6-2018.

ಸಿವಿಲ್ ಜಡ್ಜ್ ಹಾಗೂ ಜೆಎಂಎಫ್‌ಸಿ,<br>
ಆಲೂರು.